# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1336 |
| ಸದಸ್ಯರ ಹೆಸರು | : | ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.03.2025 |
| ಉತ್ತರಿಸುವ ಸಚಿವರು | : | ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಅಲ್ಪಸಂಖ್ಯಾತ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಸರ್ಕಾರವು ಹಲವು ಕ್ರಮಗಳನ್ನು ಕೈಗೊಳ್ಳಲು ಯೋಜಿಸಿದ್ದು, ಅದರಲ್ಲಿ ಈ ಹಿಂದೆ ಆಯ-ವ್ಯಯದಲ್ಲಿ 100 ಹೊಸ ಮೌಲಾನಾ ಆಜ಼ಾದ್ ಶಾಲೆಗಳನ್ನು ತೆರೆಯಲಾಗುವುದು ಎಂದು ಘೋಷಿಸಿದ್ದು, ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಹೊಸ ಮೌಲಾನಾ ಆಜ಼ಾದ್ ಶಾಲೆಗಳನ್ನು ತೆರೆಯಲಾಗಿದೆ; | 2024-25ನೇ ಸಾಲಿನ ಆಯವ್ಯಯ ಘೋಷಣೆಯಂತೆ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಸರ್ಕಾರದ ಆದೇಶ ಸಂಖ್ಯೆ: ಎಂಡಬ್ಲೂಡಿ 200 ಎಂಡಿಎಸ್ 2024 ದಿನಾಂಕ:23.09.2024 ರನ್ವಯ ಮೊದಲ ಹಂತದಲ್ಲಿ 60 ಸಂಖ್ಯಾಬಲದ 50 ಹೊಸ ಮೌಲಾನಾ ಆಜ಼ಾದ್ ಮಾದರಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. (ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-01 ರಲ್ಲಿ ನೀಡಲಾಗಿದೆ)** |
| ಆ) | ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಉದ್ಯಮಶೀಲರು ಸ್ಥಾಪಿಸುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಹೊಸ ಘಟಕಗಳನ್ನು ಸ್ಥಾಪಿಸಲು ಹಾಗೂ ಅಸ್ತಿತ್ವದಲ್ಲಿರುವ ಘಟಕಗಳ ಉನ್ನತೀಕರಣಕ್ಕೆ ಕೆ.ಎಸ್.ಎಫ್.ಸಿ ಮೂಲಕ ಪಡೆಯುವ 10 ಕೋಟಿ ರೂ.ವರೆಗಿನ ಸಾಲಕ್ಕೆ ಶೇ.6 ರಷ್ಟು ಬಡ್ಡಿ ಸಹಾಯಧನ ನೀಡಲಾಗುವುದು ಎಂದು ಆಯ-ವ್ಯಯದಲ್ಲಿ ಘೋಷಿಸಿದ್ದು, 2024-25ನೇ ಸಾಲಿನಲ್ಲಿ ಎಷ್ಟು ಫಲಾನುಭವಿಗಳು ಈ ಯೋಜನೆಯಡಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ ಮತ್ತು ಎಷ್ಟು ಫಲಾನುಭವಿಗಳ ಅರ್ಜಿಗಳನ್ನು ಪುರಸ್ಕರಿಸಲಾಗಿರುತ್ತದೆ; | ಅಲ್ಪಸಂಖ್ಯಾತರ ವರ್ಗಕ್ಕೆ ಸೇರಿದ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆಯನ್ನು 2023-24ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ ಈ ಯೋಜನೆಯು ಹೊಸ ಹಾಗೂ ಸಣ್ಣ ಉದ್ಯಮಗಳ ವಿಸ್ತರಣೆ, ವೈವಿಧ್ಯೀಕರಣ, ಆಧುನೀಕರಣ ಸೂಕ್ಷ್ಮ ಹಾಗೂ ಉನ್ನತೀಕರಣಕ್ಕೆ ಅನ್ವಯವಾಗುತ್ತದೆ. ಘಟಕವು ಸಂಪೂರ್ಣವಾಗಿ ಅಲ್ಪಸಂಖ್ಯಾತ ಸಮುದಾಯದ ಉದ್ಯಮಿಗಳ ಮಾಲೀಕತ್ವದಲ್ಲಿರಬೇಕು. ಈ ಯೋಜನೆಯಡಿ ವಾರ್ಷಿಕ ಶೇ.6 ರಷ್ಟು ಬಡ್ಡಿ ಸಹಾಯಧನವನ್ನು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಒದಗಿಸಲಾಗಿರುತ್ತದೆ. ಸಂಸ್ಥೆಯ ಸಾಮಾನ್ಯ ಬಡ್ಡಿದರದ ಹಾಗೂ ಶೇ.6ರ ಬಡ್ಡಿ ಸಹಾಯಧನದ ವ್ಯತ್ಯಾಸದ ಮೊತ್ತವನ್ನು ಫಲಾನುಭವಿಗಳು ಭರಿಸಬೇಕಾಗುತ್ತದೆ. ಈ ಬಡ್ಡಿ ಸಹಾಯಧನವನ್ನು ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಮರುಪಾವತಿಸಲಾಗುವುದು. ಈ ಯೋಜನೆಯಡಿ ಕನಿಷ್ಠ ರೂ.5.00 ಲಕ್ಷಗಳಿಂದ ಗರಿಷ್ಠ ರೂ.10.00 ಕೋಟಿಗಳವರೆಗೆ ಸಾಲದ ನೆರವು ದೊರೆಯುತ್ತದೆ ಹಾಗೂ ಸಾಲ ವಿತರಣೆಯಾದ ದಿನಾಂಕದಿಂದ 8 ವರ್ಷಗಳ ಅವಧಿಗೆ ಮಾತ್ರ ಬಡ್ಡಿ ಸಹಾಯಧನ ಪಡೆಯಲು ಫಲಾನುಭವಿಗಳು ಅರ್ಹರಾಗಿರುತ್ತಾರೆ. ಈ ಬಡ್ಡಿ ಸಹಾಯಧನ ಪ್ರಯೋಜನ ಪಡೆಯಲು ಫಲಾನುಭವಿಗಳು ಸಾಲದ ಮರುಪಾವತಿಯಲ್ಲಿ ಸುಸ್ತಿದಾರರಾಗಿರಬಾರದು. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (KSFC) ಯಿಂದ ಈ ಯೋಜನೆ ಅನುಷ್ಠಾನಗೊಂಡಾಗಿನಿಂದ ದಿನಾಂಕ:28.02.2025 ರವರೆಗೆ ಒಟ್ಟು 03 ಫಲಾನುಭವಿಗಳಿಗೆ 11.67 ಕೋಟಿ ರೂ.ಗಳ ನೆರವು ನೀಡಲಾಗಿದೆ. |

....2.

| | | |
|---|---|---|
| ಇ) | ರಾಜ್ಯದಲ್ಲಿನ ಪ್ರಮುಖ ಧಾರ್ಮಿಕ ಸ್ಥಳಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು 20 ಕೋಟಿ ರೂ. ಅನುದಾನ ಒದಗಿಸಲಾಗುವುದು ಎಂದು ಆಯ-ವ್ಯಯದಲ್ಲಿ ಘೋಷಿಸಿದ್ದು, ರಾಜ್ಯದ ಎಷ್ಟು ಪ್ರಮುಖ ಧಾರ್ಮಿಕ ಸ್ಥಳಗಳನ್ನು ಈ ಯೋಜನೆಯಡಿ ಗುರುತಿಸಲಾಗಿದೆ ಮತ್ತು ಈ ಧಾರ್ಮಿಕ ಸ್ಥಳಗಳಿಗೆ ಎಷ್ಟು ಅನುದಾನ ಒದಗಿಸಲಾಗಿದೆ? (ಧಾರ್ಮಿಕ ಸ್ಥಳವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿನ ಪ್ರಮುಖ ಧಾರ್ಮಿಕ ಸ್ಥಳಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಯೋಜನೆಯಡಿ ದಿನಾಂಕ:03.10.2024 ರಂದು ನಡೆದ ರಾಜ್ಯ ವಕ್ಫ್ ಮಂಡಳಿಯ 360ನೇ ಸಭೆಯಲ್ಲಿ ಒಟ್ಟು ಏಳು (07) ವಕ್ಫ್ ಸಂಸ್ಥೆಗಳನ್ನು ಗುರುತಿಸಲಾಗಿದ್ದು, ಅನುದಾನ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ. (ಧಾರ್ಮಿಕ ಸ್ಥಳವಾರು ಮಾಹಿತಿ **ಅನುಬಂಧ-2ರಲ್ಲಿ ನೀಡಲಾಗಿದೆ)** |

**ಸಂಖ್ಯೆ:**MWD-LMQ/55/2025

**(ಬಿ.ಜೆಡ್. ಜಮೀರ್ ಅಹ್ಮದ್ ಖಾನ್)**
ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ
ಕಲ್ಯಾಣ ಸಚಿವರು

ಅನುಬಂಧ-01

| 2024-25 ನೇ ಸಾಲಿನಲ್ಲಿ ಹೊಸದಾಗಿ ಪ್ರಾರಂಭಿಸಲಾದ 50 ಮೌಲಾನಾ ಆಜಾದ್ ಮಾದರಿ ಶಾಲೆಗಳ ಜಿಲ್ಲಾವಾರು ವಿವರ | | |
|---|---|---|
| ಕ್ರ.ಸಂ | ಜಿಲ್ಲೆ | ಮೌಲಾನಾ ಆಜಾದ್ ಮಾದರಿ ಶಾಲೆಗಳ ಸಂಖ್ಯೆ |
| 1 | ಬೆಳಗಾವಿ | 2 |
| 2 | ಬಾಗಲಕೋಟೆ | 3 |
| 3 | ವಿಜಯಪುರ | 3 |
| 4 | ಕಲಬುರಗಿ | 2 |
| 5 | ಯಾದಗಿರಿ | 2 |
| 6 | ಬೀದರ್ | 2 |
| 7 | ರಾಯಚೂರು | 4 |
| 8 | ಕೊಪ್ಪಳ | 3 |
| 9 | ಧಾರವಾಡ | 3 |
| 10 | ಉತ್ತರ ಕನ್ನಡ | 2 |
| 11 | ಹಾವೇರಿ | 4 |
| 12 | ವಿಜಯನಗರ | 2 |
| 13 | ಬಳ್ಳಾರಿ | 2 |
| 14 | ದಾವಣಗೆರೆ | 3 |
| 15 | ಶಿವಮೊಗ್ಗ | 1 |
| 16 | ಚಿಕ್ಕಮಗಳೂರು | 1 |
| 17 | ತುಮಕೂರು | 3 |
| 18 | ಕೋಲಾರ | 1 |
| 19 | ಬೆಂಗಳೂರು ಗ್ರಾಮಾಂತರ | 1 |
| 20 | ರಾಮನಗರ | 1 |
| 21 | ದಕ್ಷಿಣ ಕನ್ನಡ | 3 |
| 22 | ಮೈಸೂರು | 2 |
| ಒಟ್ಟು | | **50** |

ನಿರ್ದೇಶಕರು,
ಅಲ್ಪಸಂಖ್ಯಾತ ನಿರ್ದೇಶನಾಲಯ,
ಬೆಂಗಳೂರು.

ಅನುಬಂಧ -2

## List of the Development of Pilgrimage Places

| Sl.No. | Name of the Institution | Amount in Crores |
|---|---|---|
| 1 | Dargah Hazrath Syed Mardan-e-Gaib, Shivanasamudra, Kollegal Taluk, Chamarajanagar. | 8.50 |
| 2 | Peer Dilawar Peer Dargah, Yekkundi, Bailhongal Taluk, Belagavi. | 3.00 |
| 3 | Hazrath Syed Suleiman Basha Khadri Urf Dood Nana Peeran, Laxmeshwar Town, Gadag District. | 2.00 |
| 4 | Hyder Shah Wali Dargah, Santhepet, Chitradurga. | 2.00 |
| 5 | Nandavara Jumma Masjid and Dargah Shariff, Nandavara, Dakshina Kannada. | 1.00 |
| 6 | Dargah Hazrath Shaik-ul-Akbar Anwar Masoom Shah Vali Allah, Mudugoppa Village, Nagara Hobli, Hosanagara Taluk, Shivamogga. | 1.50 |
| 7 | Kudachi Dargah Estate, Chikodi, Belagavi District. | 2.00 |

Chief Executive Officer
Karnataka State Board of Auqaf

Scanned with OKEN Scanner